**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 45 ಃ 2014**

| | | |
|---|---|---|
| **ಹೆಸರು** | ಃ ಎ.ಜಿ.ಚಿಕ್ಕಸ್ವಾಮೀಗೌಡ | ಸಿ.ಡಬ್ಲ್ಯೂ ಃ |
| **ತಂದೆಯ ಹೆಸರು** | ಃ ಲೇಟ್ ಗೂಳೀಗೌಡ | ಪಿ.ಡಬ್ಲ್ಯೂಃ 1 |
| **ವಯಸ್ಸು** | ಃ 46 ವರ್ಷ | ಸಾಕ್ಷಿಯನ್ನು ದಿಃ **12-12-2017** |
| **ಉದ್ಯೋಗ** | ಃ ಸಿ.ಹೆಚ್.ಸಿ.76 ಬೆಳಕವಾಡಿ ಪೋಲೀಸ್ ಠಾಣೆ | ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |
| **ವಾಸ ಸ್ಥಳ** | ಃ ಬೆಳಕವಾಡಿ | |

**ಕಲಂ 299 ಸಿಆರ್‌ಪಿಸಿ ಅನ್ವಯ ಸಾಕ್ಷಿಯ ವಿಚಾರಣೆ.**

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ.**

ನಾನು ಸೆಪ್ಟೆಂಬರ್ 2016 ರಿಂದ ಇಲ್ಲಿಯವರೆಗೆ ಬೆಳಕವಾಡಿ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದ ಅರೋಪಿಯ ಅಸ್ತಿಗಳನ್ನು ಜಪ್ತಿ ಮಾಡಲು ವಾರೆಂಟ್ ಹೊರಡಿಸಿದ ಮೇರೆಗೆ ನಾನು ಅರೋಪಿಯ ವಿಳಾಸಕ್ಕೆ ಭೇಟಿ ನೀಡಿ ಅರೋಪಿಗೆ ಚರ ಮತ್ತು ಸ್ಥಿರ ಆಸ್ತಿ ಇರುವ ಬಗ್ಗೆ ಗ್ರಾಮಸ್ಥರನ್ನು ವಿಚಾರಿಸಿದಾಗ ಆರೋಪಿಯ ಹೆಸರಿಗೆ ಯಾವುದೇ ಚರ ಹಾಗೂ ಸ್ಥಿರ ಆಸ್ತಿಗಳು ಇರುವ ಬಗ್ಗೆ ಮಾಹಿತಿ ದೊರಕದೇ ಇರುವುದರಿಂದ ದಿನಾಂಕ 30.8.2017 ರಂದು ಬನ್ನಿಕುಪ್ಪೆ ಗ್ರಾಮಾ ಪಂಚಾಯಿತಿ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಿ ಅರೋಪಿ ಹೆಸರಿನಲ್ಲಿ ಚರ ಹಾಗೂ ಸ್ಥಿರ ಆಸ್ತಿ ಇರುವ ಬಗ್ಗೆ ಮಾಹಿತಿ ನೀಡಬೇಕೆಂದು ಕೋರಿದ ಮೇರೆಗೆ ಪಂಚಾಯಿತಿ ಬನ್ನಿಕುಪ್ಪೆ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಅರೋಪಿ ಹೆಸರಿಗೆ ಚರ ಹಾಗೂ ಸ್ಥಿರ ಆಸ್ತಿಗಳು ಇರುವುದಿಲ್ಲ ಎಂದು ದೃಡೀಕರಣ ಪತ್ರ ನೀಡಿರುತ್ತಾರೆ. ನ್ಯಾಯಾಲಯವು ಹೊರಡಿಸಿರುವ ಜಪ್ತಿ ವಾರೆಂಟ್ ನೋಡುತ್ತಿದ್ದು ಅದನ್ನು ನಿಸಿ-1 ಎಂದು ಗುರುತಿಸಲಾಯಿತು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ನೀಡಿರುವ ದೃಡೀಕರಣ ಪತ್ರವನ್ನು ನಿಸಿ-2 ಎಂದು ಗುರುತಿಸಲಾಯಿತು.

ಆರೋಪಿಯ ವಿರುದ್ದ ನ್ಯಾಯಾಲಯದ ಉದ್ಘೋಷಣೆ ಹೊರಡಿಸಿರುವುದರಿಂದ, ಪಾಟೀ ಸವಾಲು ಇರುವುದಿಲ್ಲ.

ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಕನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಮಳವಳ್ಳಿ.